ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 489 ಎಸಿಎಂ(2) 2017-18

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 03-02-2018.

**-:: ಸುತ್ತೋಲೆ ::-**

**ವಿಷಯ:** ಡಿಪ್ಲೋಮಾ ಪ್ರವೇಶ ಸಂಬಂಧ ವಿದ್ಯಾರ್ಥಿಗಳ ದಾಖಲಾತಿ ಸುಧಾರಣೆ ಮಾಡಲು **'ದಾಖಲಾತಿ ಆಂದೋಲನ ಕಾರ್ಯಕ್ರಮ'** ಹಮ್ಮಿಕೊಳ್ಳುವ ಬಗ್ಗೆ.

**ಉಲ್ಲೇಖ:** ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು ಇವರ ಸಭಾ ಸೂಚನೆ ಪತ್ರ ಸಂ. ಅಮುಕ/67/ಎಸಿ/2018, ದಿ:24-01-2018.

-00000000-

ಇತ್ತೀಚಿಗೆ ಬಿಡುಗಡೆಯಾದ All India Survey of Higher Education 2016-17 ರಲ್ಲಿ ಉನ್ನತ ಶಿಕ್ಷಣದಲ್ಲಿ ಒಟ್ಟು ದಾಖಲಾತಿ ಅನುಪಾತ (Gross Enrolment Ratio) ಅಂಕಿ ಅಂಶಗಳನ್ನು ನೀಡಿರುತ್ತದೆ. ಅದರನ್ವಯ ಸುತ್ತಮುತ್ತಲಿನ ರಾಜ್ಯಗಳಿಗೆ ಹೋಲಿಸಿದಲ್ಲಿ ಕರ್ನಾಟಕದ ಒಟ್ಟು ದಾಖಲಾತಿ ಅನುಪಾತ ಅತ್ಯಂತ ಕಡಿಮೆ ಇರುತ್ತದೆಂದು ವರದಿ ನೀಡಲಾಗಿದೆ. ಈ ಸಂಬಂಧ ಅಪರ ಮುಖ್ಯ ಕಾರ್ಯದರ್ಶಿಯವರು ದಿನಾಂಕ:01-02-2018ರಂದು ಕರೆದ ಸಭೆಯಲ್ಲಿ ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸಲು **'ದಾಖಲಾತಿ ಆಂದೋಲನ ಕಾರ್ಯಕ್ರಮ'** ಹಮ್ಮಿಕೊಳ್ಳಲು ಸೂಚಿಸಿರುತ್ತಾರೆ.

ಆದ್ದರಿಂದ, ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರು ತಮ್ಮ ಉಪನ್ಯಾಸಕರ ತಂಡದೊಂದಿಗೆ ಸಂಸ್ಥೆಯ ಸುತ್ತಮುತ್ತಲಿನ ಪ್ರೌಢಶಾಲೆಗಳಿಗೆ ಭೇಟಿ ನೀಡಿ ಎಸ್.ಎಸ್.ಎಲ್.ಸಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಡಿಪ್ಲೋಮಾ ಕೋರ್ಸುಗಳ ಬಗ್ಗೆ ಹಾಗೂ ಡಿಪ್ಲೋಮಾ ಶಿಕ್ಷಣ ಹೊಂದಲು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗೆ ಡಿಪ್ಲೋಮಾ ಪ್ರವೇಶದಲ್ಲಿ ಇರುವ ಶುಲ್ಕ ವಿನಾಯಿತಿ, ವಿದ್ಯಾರ್ಥಿನಿಲಯ ಸವಲತ್ತುಗಳ ಬಗ್ಗೆ ಹಾಗೂ ಡಿಪ್ಲೋಮಾ ನಂತರದ ಶೈಕ್ಷಣಿಕ, ಉದ್ಯೋಗ ಅವಕಾಶಗಳ ಬಗ್ಗೆ ತಿಳುವಳಿಕೆ ನೀಡಿ ವಿದ್ಯಾರ್ಥಿಗಳು ಡಿಪ್ಲೋಮಾ ಪ್ರವೇಶ ಹೊಂದುವಂತೆ ಉತ್ತೇಜಿಸಲು ಯೋಜಿತ ಕಾರ್ಯಕ್ರಮ ಹಮ್ಮಿಕೊಳ್ಳಲು ಸೂಚಿಸಲಾಗಿದೆ.

ಇದೊಂದು ಸರ್ಕಾರ ನಿರ್ದೇಶಿಸಿದ ಮುಖ್ಯ ಕಾರ್ಯಕ್ರಮವಾಗಿದ್ದು ಪ್ರಾಂಶುಪಾಲರು ವೈಯಕ್ತಿಕ ಆಸಕ್ತಿವಹಿಸಿ ಡಿಪ್ಲೋಮಾ ಪ್ರವೇಶಾತಿಯು ಉತ್ತಮಗೊಳ್ಳಲು ಅಗತ್ಯ ಪರಿಣಾಮಕಾರಿ ಕ್ರಮ ಜರುಗಿಸಿ, ಈ ಸಂಬಂಧ ನಿರ್ದೇಶನಾಲಯಕ್ಕೆ ದಿನಾಂಕ:19-02-2018ರ ಒಳಗಾಗಿ ವರದಿ ಸಲ್ಲಿಸಲು ಸೂಚಿಸಲಾಗಿದೆ.

ನಿರ್ದೇಶಕರು

**ಇವರಿಗೆ,**

*ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಂಶುಪಾಲರಿಗೆ - ಸೂಕ್ತ ಕ್ರಮಕ್ಕಾಗಿ ಹಾಗೂ ಅನುಸರಣೆಗಾಗಿ.*

ಪ್ರತಿ:–

1. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಜಂಟಿ ನಿರ್ದೇಶಕರು(ಪರೀಕ್ಷೆ), ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
3. ನಿರ್ದೇಶಕರ ಆಪ್ತಶಾಖೆಗೆ.
4. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂ.ಶಿ.ನಿ, ಬೆಂಗಳೂರು.
5. ಸಂಯೋಜನಾಧಿಕಾರಿಗಳು, ಇ–ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ. ಬೆಂಗಳೂರು – ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
6. ಕಛೇರಿ ಪ್ರತಿ.